# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 470
2. ಸದಸ್ಯರ ಹೆಸರು : ಶ್ರೀ ಟಿ. ಎ. ಶರವಣ
3. ಉತ್ತರಿಸಬೇಕಾದ ದಿನಾಂಕ : 15-09-2022

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದ ಮಹತ್ವಾಕಾಂಕ್ಷೆಯ ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರದ ಪರಿಹಾರ ಮಂಜೂರಾತಿ ಸೇರಿದಂತೆ ಇನ್ನಿತರೆ ಇಲಾಖೆಗಳ ಅನುಮತಿ ಪಡೆಯಲಾಗಿದೆಯೇ; ಈ ಬಗ್ಗೆ ವಸ್ತು ಸ್ಥಿತಿಯ ಸಮಗ್ರ ವಿವರವನ್ನು ನೀಡುವುದು; | ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯುವ ಕುರಿತ ಮಾಹಿತಿಯು ಈ ಕೆಳಗಿನಂತಿದೆ:<br>• ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯ Pre-Feasibility Report (PFR) ಅನ್ನು ಅನುಮೋದನೆ ಕೋರಿ ಕೇಂದ್ರ ಜಲ ಆಯೋಗಕ್ಕೆ ದಿನಾಂಕ:04.08.2018 ರಂದು ಸಲ್ಲಿಸಲಾಗಿರುತ್ತದೆ.<br>• ಕೇಂದ್ರ ಜಲ ಆಯೋಗದ ದಿನಾಂಕ:22.11.2018ರ ಪತ್ರದಲ್ಲಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ತಾತ್ವಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.<br>• ಈ ಯೋಜನೆಯ ವಿವರವಾದ ಯೋಜನಾ ವರದಿಯನ್ನು ರೂ.9000.00 ಕೋಟಿ ಮೊತ್ತಕ್ಕೆ ತಯಾರಿಸಿ ದಿನಾಂಕ:18.01.2019 ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳ ಪರಿಶೀಲನಾ ಹಂತದಲ್ಲಿರುತ್ತದೆ.<br>• ಸದರಿ ವಿಷಯವು ಹಲವಾರು ಬಾರಿ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ (CWMA) ಸಭೆಗಳಲ್ಲಿ ಚರ್ಚೆಗೆ ಒಳಪಟ್ಟಿದ್ದು, ಮುಂದೂಡಲ್ಪಟ್ಟಿರುತ್ತದೆ.<br>**ಯೋಜನೆಯ ಪರಿಸರ ಮತ್ತು ಅರಣ್ಯ ಇಲಾಖೆಯ ತೀರುವಳಿ:**<br>• ಸದರಿ ಯೋಜನೆಗೆ ಅವಶ್ಯವಿರುವ EIA (Environmental Impact Assessment) & EMP (Environmental Management Plan) ವರದಿಗಳನ್ನು ತಯಾರಿಸಲು Terms of References (ToR) ಅರ್ಜಿಯನ್ನು ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯದ (MoEF&CC) ಅಂತರ್ಜಾಲದಲ್ಲಿ ದಿನಾಂಕ:20.06.2019 ರಂದು ಅಪ್‌ಲೋಡ್ ಮಾಡಲಾಗಿರುತ್ತದೆ.<br>• ಅದರಂತೆ ಈ ಪ್ರಸ್ತಾವನೆಯನ್ನು ದಿನಾಂಕ:19.07.2019 ರಂದು ನಡೆದ Expert Appraisal Committee (EAC), MoEF ಈ ಸಭೆಯಲ್ಲಿ ಮಂಡಿಸಲಾಗಿತ್ತು, ಸದರಿ ನಡವಳಿಗಳು ಸ್ವೀಕೃತವಾಗಿದ್ದು ಸೂಚಿಸಿರುವ ಹೆಚ್ಚುವರಿ ಮಾಹಿತಿಗಳನ್ನು ದಿನಾಂಕ:04.10.2019 ರಂದು MoEF ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲಾಗಿದೆ ಹಾಗೂ ಸದರಿ ಯೋಜನೆಗೆ ಅವಶ್ಯವಿರುವ ಅರಣ್ಯ ಭೂಮಿಗೆ ಬದಲಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸುವ compensatory afforestation land ಅನ್ನು ಗುರುತಿಸಲಾಗಿರುತ್ತದೆ. |
| ಆ | ಈ ಯೋಜನೆಗೆ ಮಂಜೂರಾತಿ ನೀಡುವಲ್ಲಿ ಕೇಂದ್ರದ ನಿಲುವು ಮತ್ತು ರಾಜ್ಯ ಸರ್ಕಾರದ ಜೊತೆ ಕೇಂದ್ರ ಜಲಸಂಪನ್ಮೂಲ ಸಚಿವಾಲಯ ನಡೆಸಿರುವ ಪತ್ರ ವ್ಯವಹಾರಗಳ ಮಾಹಿತಿ ನೀಡುವುದು; | |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | • ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರು ಮಾನ್ಯ ಸಚಿವರು, ಜಲ ಶಕ್ತಿ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ದಿನಾಂಕ:15.06.2019, 06.08.2019, 11.11.2019, 15.12.2019, 18.09.2020, 25.08.2021 ಹಾಗೂ ಇತ್ತೀಚೆಗೆ ಬರೆದಿರುವ ದಿನಾಂಕ:05.04.2022ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಅಗತ್ಯ ಅನುಮೋದನೆ ಕೋರಿರುತ್ತಾರೆ.<br>• ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರರವರು ದಿನಾಂಕ:03.07.2021 ರಂದು ಸನ್ಮಾನ್ಯ ಪ್ರಧಾನಮಂತ್ರಿಗಳವರಿಗೆ, ಮಾನ್ಯ ಕೇಂದ್ರ ಜಲ ಶಕ್ತಿ ಸಚಿವರಿಗೆ ಹಾಗೂ ಮಾನ್ಯ ಕೇಂದ್ರ ಪರಿಸರ ಸಚಿವರಿಗೆ ಯೋಜನೆಗೆ ಅವಶ್ಯವಿರುವ Environmental Impact Assessment (EIA) & Environmental Management Plan (EMP) ವರದಿಗಳನ್ನು ತಯಾರಿಸಲು Terms of Reference (TOR) ಗೆ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ದೊರಕಿಸಿಕೊಡಲು ಕೋರಿರುತ್ತಾರೆ.<br>• ಮಾನ್ಯ ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರರವರು ದಿನಾಂಕ:03.07.2019, 25.02.2020, 14.07.2020, 18.11.2020, 14.06.2022 ಹಾಗೂ 24.07.2022 ರ ಪತ್ರಗಳಲ್ಲಿ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಅನುಮೋದನೆ ದೊರಕಿಸಿ ಕೊಡುವಂತೆ ಕೇಂದ್ರ ಸರ್ಕಾರದ ಮಾನ್ಯ ಜಲಶಕ್ತಿ ಸಚಿವರನ್ನು ಕೋರಿರುತ್ತಾರೆ.<br>• ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರರವರು ಮಾನ್ಯ ಕಾರ್ಯದರ್ಶಿಗಳು, ಕೇಂದ್ರ ಜಲ ಶಕ್ತಿ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ದಿನಾಂಕ:19.11.2019 ಮತ್ತು 08.05.2020 ರ ಪತ್ರಗಳಲ್ಲಿ ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದನೆ ನೀಡುವಂತೆ ಸೂಚಿಸಲು ಕೋರಿರುತ್ತಾರೆ. |
| ಇ | ಈ ಯೋಜನೆಗೆ ಅನುಮತಿ ಸಿಗಲು ನ್ಯಾಯಾಲಯದಲ್ಲಿ ನಡೆಸಿರುವ ಕಾನೂನು ಹೋರಾಟದ ಬಗ್ಗೆ ಮಾಹಿತಿ ನೀಡುವುದು? | ಯೋಜನೆ ಕುರಿತಂತೆ ನ್ಯಾಯಾಲಯದ ಪ್ರಕರಣಗಳ ಮಾಹಿತಿಯು ಈ ಕೆಳಗಿನಂತಿದೆ:<br><br>**ಮಿಸ್ಸಲೇನಿಯಸ್ ಅರ್ಜಿ ಸಂ: 3127/2018:**<br>• ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲು ಕರ್ನಾಟಕಕ್ಕೆ ಅನುಮತಿ ನೀಡಿರುವ ದಿನಾಂಕ:22.11.2018 ರ ಪತ್ರವನ್ನು ಅನುಷ್ಠಾನಗೊಳಿಸದಂತೆ ಪ್ರಾರ್ಥಿಸಿ ತಮಿಳುನಾಡು ರಾಜ್ಯವು ದಿನಾಂಕ:30.11.2018 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮಿಸ್ಸಲೇನಿಯಸ್ ಅರ್ಜಿ ಸಂ:3127/2018 ಯನ್ನು ಸಲ್ಲಿಸಿದೆ. ಸದರಿ ಅರ್ಜಿಗೆ ಕೇಂದ್ರ ಸರ್ಕಾರವು ಪ್ರತಿ ಪ್ರಮಾಣ ಪತ್ರವನ್ನು ದಿನಾಂಕ:11.01.2019 ರಂದು ಕರ್ನಾಟಕ ರಾಜ್ಯವು ದಿನಾಂಕ:04.01.2019 ರಂದು ತನ್ನ ಉತ್ತರಗಳನ್ನು ಸಲ್ಲಿಸಿದೆ. |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|

- ತಮಿಳುನಾಡು ರಾಜ್ಯವು ಸಲ್ಲಿಸಿರುವ ಮಿಸಲೇನಿಯಸ್ ಅರ್ಜಿ ಸಂ:3127/2018 ಹಾಗೂ ಅದರಡಿ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿಗಳ ವಿಚಾರಣೆಯು ದಿನಾಂಕ:11.07.2022, 20.07.2022 ಮತ್ತು 26.07.2022 ರಂದು ಜರುಗಿರುತ್ತದೆ. ಮುಂದಿನ ವಿಚಾರಣೆಯನ್ನು ದಿನಾಂಕ:10.08.2022 ರಂದು ನಿಗದಿಪಡಿಸಲಾಗಿತ್ತು. ಆದರೆ ಅರ್ಜಿಯು ವಿಚಾರಣೆಗೆ ಬಂದಿರುವುದಿಲ್ಲ.
- ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲ ತಾಣದ ಮಾಹಿತಿಯಂತೆ ಅರ್ಜಿಯು ದಿನಾಂಕ:26.09.2022ರಂದು ಪಟ್ಟಿಯಾಗಿರುತ್ತದೆ.

**ಸಿವಿಲ್ ಅರ್ಜಿ ಸಂ. 5608/2021:**

- ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಪ್ರಧಾನ ಪೀಠವು ದಿನಾಂಕ:17.06.2021 ರಂದು ಮೇಕೆದಾಟು ಯೋಜನೆಯ ಬಗ್ಗೆ ನೀಡಿರುವ ಅಂತಿಮ ಆದೇಶದ ವಿರುದ್ಧ ತಡೆಯಾಜ್ಞೆ ನೀಡುವಂತೆ ಪ್ರಾರ್ಥಿಸಿ ತಮಿಳುನಾಡು ಸರ್ಕಾರ ದಿನಾಂಕ:11.08.2021 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದೆ.
- ಸದರಿ ಅರ್ಜಿಗೆ ಕರ್ನಾಟಕ ರಾಜ್ಯದ ಪರವಾಗಿ ಕೇವಿಯಟ್‌ನ್ನು ಸಲ್ಲಿಸಲಾಗಿದೆ. ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.

**ಮಿಸ್ಸಲೇನಿಯಸ್ ಅರ್ಜಿ ಸಂ: 000093/2022:**

- ತಮಿಳುನಾಡು ಸರ್ಕಾರದವರು ದಿನಾಂಕ:27.08.2021 ರಂದು ಸರ್ವೋಚ್ಛ ನ್ಯಾಯಾಲಯದಲ್ಲಿ ಮಿಸ್ಸಲೇನಿಯಸ್ ಅರ್ಜಿ ಸಂ:000093/2022ನ್ನು ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಕರ್ನಾಟಕ ಸರ್ಕಾರವು ಅನುಮೋದನೆಗಾಗಿ ಸಲ್ಲಿಸಿರುವ ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಿರಸ್ಕರಿಸುವಂತೆ ಕೇಂದ್ರ ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕೆಂದು ಹಾಗೂ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯು ಯಾವುದೇ ತೀರುವಳಿಗಳನ್ನು ನೀಡದಂತೆ ಕೇಂದ್ರ ಪರಿಸರ ಹಾಗೂ ಅರಣ್ಯ ಇಲಾಖೆಗೆ ನಿರ್ದೇಶನ ನೀಡಬೇಕೆಂದು ಪ್ರಾರ್ಥಿಸಿದೆ.

ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಸರ್ಕಾರದ ಅಗತ್ಯ ತೀರುವಳಿಗಳನ್ನು ಪಡೆಯಲು ಹಾಗೂ ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ಇತ್ಯರ್ಥಪಡಿಸಲು ಎಲ್ಲಾ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

*ಸಂಖ್ಯೆ:ಜಸಂಇ 79 ಎನ್‌ಎಲ್‌ಎ 2022*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು